**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಇಂಡಿ**

**ಸಿ.ಮಿ. ನಂ:06/2015**

**ಪಿ.ಡಬ್ಲ್ಯು-1**

**ದಿ: 16-06-2026 ರ ಮೇರೆಗೆ ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ.ಎಸ್.ಜಿ.ಕೆ. ವಕೀಲರಿಂದಃ**

ನಿ.ಪಿ.9 ಮತ್ತು 10 ರ ಬಗ್ಗೆ ನನಗೆ ಪ್ರಕರಣವನ್ನು ದಾಖಲು ಮಾಡುವ ಮೊದಲು ಮಾಹಿತಿ ಇತ್ತು ಎಂದರೆ ಸರಿಯಲ್ಲ. ನಿ.ಪಿ.9 ಮತ್ತು 10 ರ ತೀರ್ಪು ಮತ್ತು ಡಿಕ್ರಿಯ ಪ್ರತಿಯಲ್ಲಿ ನಾನು ಸಹ ಪಕ್ಷಗಾರನು ಆಗಿ ಇದ್ದೇನು ಎಂದರೆ ಸರಿ. ನಾನು ಪಕ್ಷಗಾರನು ಆಗಿರುವ ಕಾರಣ ನನಗೆ ಮೊದಲೇ ಮಾಹಿತಿ ಇತ್ತು ಎಂದರೆ ಸರಿಯಲ್ಲ. ನಿ.ಪಿ.9 ಕ್ಕೆ ಸಹಿ ಮಾಡಿರುತ್ತೀರಿ ಎನ್ನುವ ಪ್ರಶ್ನೆಗೆ ಸಾಕ್ಷಿಯು ಒತ್ತಾಯ ಪೂರ್ವಕವಾಗಿ ಸಹಿ ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. ನಿ.ಪಿ.9 ಮತ್ತು 10 ರ ಬಗ್ಗೆ ನನಗೆ ಈ ಪ್ರಕರಣವನ್ನು ದಾಖಲು ಮಾಡುವ ಮೊದಲೇ ಮಾಹಿತಿ ಇದ್ದರು ಸಹ ಅದನ್ನು ಮುಚ್ಚಿಟ್ಟು ಈ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ.9 ಮತ್ತು 10 ಈ ಪ್ರಕರಣಕ್ಕೆ ಅನುಕೂಲವಾಗದೇ ಇದ್ದರು ಸಹ ನಾನು ಎದುರುದಾರರಿಗೆ ತೊಂದರೆ ಕೊಡುವ ದುರುದ್ದೇಶದಿಂದ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಸಹಿ/-**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ.ಇಂಡಿ.**